ಹೇಳಿ, ಹೆಬ್ಬೂರು, ಗೂಳೂರಿಗೆ ಕುಡಿಯುವ ನೀರಿನ ಯೋಜನೆ ಇದೆ. ಅದರೊಂದಿಗೆ ಹೊನ್ನವಳ್ಳಿ ಕೂಡ ಸೇರಿಕೊಂಡಿದೆ, ಅದನ್ನು ಕೂಡ ಈ ಯೋಜನೆಯನ್ನು ಕಾವೇರಿ ಜಲವಿವಾದ ನ್ಯಾಯಮಂಡಳಿ ಮುಂದೆ ಇಟ್ಟರೆ....

ಛೇರ್ಮನ್ :– ತಾವು ಪ್ರಸ್ತಾಪ ಮಾಡಲಿಕ್ಕಷ್ಟೇ ಅವಕಾಶ, ತಾವು ಅನುಮತಿಯನ್ನು ಕೇಳಿದ್ದೀರಿ, ಪ್ರಸ್ತಾಪ ಮಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ. ಸಾಕು ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್. ಲಿಂಗಪ್ಪ :– ನಾನು ಅದನ್ನು ವಿವರಿಸಿ ಹೇಳದೇ ಹೋದರೆ ಸರ್ಕಾರಕ್ಕೆ ಅರ್ಥವಾಗದೇ ಇರಬಹುದು.

ಛೇರ್ಮನ್ :– ಶೂನ್ಯವೇಳೆಯಲ್ಲಿ ವಿವರಣೆಗೆ ಅವಕಾಶವಿಲ್ಲ, ತಾವು ಪ್ರಸ್ತಾಪ ಮಾಡಿದ್ದೀರಿ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಸವರಾಜ ಎಸ್. ಹೊರಟ್ಟಿ :– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂಥ ಎಲ್ಲಾ ವಿಚಾರಗಳನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳೆ ನಾಳೆಗೆ ಉತ್ತರವನ್ನು ಕೊಡಿಸುತ್ತೇನೆ.

ಛೇರ್ಮನ್ :– ಶ್ರೀ ದಿನೇಶ್ ಗುಂಡೂರಾವ್

3) ವಿಷಯ :– ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಸೈಕಲ್ ನೀಡಿಕೆ ಕಾರ್ಯಕ್ರಮದಲ್ಲಿ ಆಗುತ್ತಿರುವ ಲೋಪದೋಷಗಳ ಬಗ್ಗೆ.

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) :– ನಾನು ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಸೈಕಲ್ ನೀಡಿಕೆ ಕಾರ್ಯಕ್ರಮದಲ್ಲಿ ಆಗುತ್ತಿರುವ ಲೋಪದೋಷಗಳ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಬಸವರಾಜ ಎಸ್. ಹೊರಟ್ಟಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :–

ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ದೂರದ ಹಳ್ಳಿಗಳಿಂದ ಶಾಲೆಗೆ ಬರುವಾಗ ಅನೇಕ ತೊಂದರೆಗಳನ್ನು ಅನುಭವಿಸುತ್ತಾರೆ ಎಂಬುದನ್ನು ಮನಗಂಡು ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ 7ನೇ ತರಗತಿ ಪಾಸು ಮಾಡಿ, 8ನೇ ತರಗತಿಗೆ ದಾಖಲಾಗಿ ಕಲಿಕೆ ಮುಂದುವರಿಸುವ ಹೆಣ್ಣು ಮಕ್ಕಳು ಮನೆಯಿಂದ ಶಾಲೆಗೆ ಹೋಗಿ ಬರಲು ಆಗುವ ಅನುಕೂಲದ ಜೊತೆಗೆ ಅವರಲ್ಲಿ ಧೈರ್ಯ ಮತ್ತು ಆತ್ಮ ವಿಶ್ವಾಸ ಮೂಡಿಸಲು ಪ್ರೇರಣೆ

ನೀಡುವ ಸಲುವಾಗಿ ಸರ್ಕಾರಿ ವೆಚ್ಚದಲ್ಲಿ ಬೈಸಿಕಲ್ ನೀಡಲು ಸರ್ಕಾರ ನಿರ್ಧರಿಸಿ ಆದೇಶ ಸಂಖ್ಯೆ : ಇಡಿ 93 ಯೋಯೋಕಾ 2006 ಬೆಂಗಳೂರು ದಿನಾಂಕ 14–07–2006 ರನ್ವಯ 2006–07ನೇ ಸಾಲಿನಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬಗಳಿಗೆ ಸೇರಿದ ಹೆಣ್ಣು ಮಕ್ಕಳಿಗೆ ಉಚಿತ ಬೈಸಿಕಲ್‌ಗಳನ್ನು ವಿತರಿಸಲು ಆದೇಶ ನೀಡಲಾಗಿದೆ. ದಿನಾಂಕ 02–05–2006 ರಲ್ಲಿ ಈ ಬಗ್ಗೆ ಪತ್ರಿಕೆಯಲ್ಲಿ ಟೆಂಡರ್ ಜಾಹಿರಾತು ನೀಡಿ ದಿನಾಂಕ 31–05–2006 ರೊಳಗಾಗಿ ಅರ್ಜಿ ಸಲ್ಲಿಸಲು ತಿಳಿಸಲಾಗಿತ್ತು. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ತಾಂತ್ರಿಕ ಸಮಿತಿ ರಚಿಸಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000 ರಲ್ಲಿನ ನಿಯಮವನ್ನು ಅನುಸರಿಸಿ ಪ್ರತಿ ಬೈಸಿಕಲ್ ದರ ರೂ.2030/– ಕ್ಕೆ ನಿಗದಿಗೊಳಿಸಿ (1) ಮೆ॥ ಟಿ.ಐ.ಸೈಕಲ್ಸ್ ಲಿಮಿಟೆಡ್, ಅಂಬತ್ತೂರು, ಚೆನ್ನೈ, (2) ಮೆ॥ ಹೀರೋ ಸೈಕಲ್ಸ್ ಲಿಮಿಟೆಡ್, ಲೂಧಿಯಾನ, (3) ಮೆ॥ ಅಟ್ಲಾಸ್ ಸೈಕಲ್ಸ್ (ಹರಿಯಾಣ) ಲಿಮಿಟೆಡ್, (4) ಮೆ॥ ಏವನ್ ಸೈಕಲ್ಸ್ ಲಿಮಿಟೆಡ್, ಲೂಧಿಯಾನ ಈ ನಾಲ್ಕು ಅರ್ಹ ಸರಬರಾಜುದಾರರನ್ನು ಆಯ್ಕೆ ಮಾಡಿ ಈ ಸಂಸ್ಥೆಗಳಿಂದ ಬೈಸಿಕಲ್‌ಗಳನ್ನು ಖರೀದಿ ಮಾಡಲಾಗಿದೆ. ಈ ಬಗ್ಗೆ ಅನುಮೋದನೆ ನೀಡಿ ಸರ್ಕಾರಿ ಆದೇಶವನ್ನು ದಿನಾಂಕ 14–07–2006 ರಂದು ಹೊರಡಿಸಲಾಗಿದೆ. ರಾಜ್ಯದ ಎಲ್ಲಾ 202 ತಾಲ್ಲೂಕುಗಳಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಂದ ಬಂದಿರುವ 1,75,023 ಬಾಲಕಿಯರಿಗೆ ಬೈಸಿಕಲ್‌ಗಳನ್ನು ವಿತರಿಸಲಾಗಿದೆ.

ಸರಬರಾಜುದಾರರಿಗೆ ವಿಭಾಗವಾರು ಬೈಸಿಕಲ್‌ಗಳನ್ನು ಸರಬರಾಜು ಮಾಡಲು ದಿನಾಂಕ : 17–07–2006 ರಂದು ಆದೇಶವನ್ನು ನೀಡಿ ದಿನಾಂಕ 10–10–2006 ರೊಳಗಾಗಿ ಸರಬರಾಜು ಪೂರ್ಣಗೊಳಿಸಲು ತಿಳಿಸಲಾಗಿತ್ತು. ನಿಗದಿತ ದಿನಾಂಕದೊಳಗಾಗಿ ಸರಬರಾಜು ಮಾಡದ ಸಂಸ್ಥೆಯವರಿಗೆ ನಿಯಮಾನುಸಾರ ದಂಡವನ್ನು ಸಹ ವಿಧಿಸಲಾಗಿದೆ. ಈ ಯೋಜನೆಗೆ ಒಟ್ಟು ರೂ.35.74 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಯೋಜನೆಯು ರಾಜ್ಯ ಸರ್ಕಾರದ ಯೋಜನೆಯಾಗಿರುವುದರಿಂದ ಅನುದಾನವನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರವೇ ಭರಿಸುತ್ತಿದೆ. ಬೈಸಿಕಲ್ ಮಾಡಲ್ IS 10613-2004 ಆಗಿದ್ದು ಹಸಿರು ಬಣ್ಣದ್ದಾಗಿದ್ದು, 20" ಎತ್ತರ ಉಳ್ಳದ್ದಾಗಿದ್ದು. ಸ್ಯಾರೀ ಗಾರ್ಡ್ ಮತ್ತು ಫ್ರಂಟ್ ಬ್ಯಾಸ್ಕೆಟ್ ಹೊಂದಿದ್ದು ಅದರ ಮೇಲೆ "ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ" ಎನ್ನುವ ಸ್ಲೋಗನ್ ಒಳಗೊಂಡಿರುವ ಹೆಣ್ಣು ಮಗುವಿನ ಚಿತ್ರವಿರುವ ಲೋಗೋವನ್ನು ಅಳವಡಿಸಲಾಗಿದೆ,

ಸರಬರಾಜು ಮಾಡಿರುವ ಬೈಸಿಕಲ್‌ಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು ರಾಜ್ಯ/ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ 4 ಜನರ ಸಮಿತಿಯನ್ನು (ಶಿಕ್ಷಣ ಇಲಾಖೆಯಿಂದ 2 ಅಧಿಕಾರಿ ಮತ್ತು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ 2 ಅಧಿಕಾರಿಗಳು) ರಚಿಸಿ ಅವರಿಗೆ "Visual Inspection" ಮಾಡುವುದರ ಬಗ್ಗೆ ತರಬೇತಿಯನ್ನು ನೀಡಿ ಅನುಮೋದಿಸಲಾದ ತಾಂತ್ರಿಕ ಗುಣಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ಎಲ್ಲಾ ಕ್ರಮವನ್ನು ಕೈಗೊಳ್ಳಲಾಗಿದೆ ಹಾಗೂ ಪ್ರತಿ ತಾಲ್ಲೂಕಿಗೆ ಒಂದು ಬೈಸಿಕಲ್‌ನಂತೆ ಒಟ್ಟು 202 ತಾಲ್ಲೂಕಿನ ಬೈಸಿಕಲ್‌ಗಳನ್ನು ದೇಶದ ಏಕೈಕ ಬೈಸಿಕಲ್ ಉತ್ಪಾದನಾ ಘಟಕ ಮತ್ತು ಪಂಜಾಬ್ ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿರುವ ಸಂಸ್ಥೆಯಾದ ಆರ್ & ಡಿ ಸೆಂಟರ್, ಲೂಧಿಯಾನ ಇವರಿಂದ ಪರಿಶೀಲನೆಗೊಳಪಡಿಸಲಾಗಿದೆ.

ಈ ಯೋಜನೆಯನ್ನು ಅಲ್ಪಾವಧಿಯಲ್ಲಿ ಸಮರ್ಪಕವಾಗಿ ಅನುಷ್ಠಾನ ಗೊಳಿಸಲಾಗಿದೆ. ವಿದ್ಯಾರ್ಥಿನಿಯರು ಬೈಸಿಕಲ್‌ಗಳನ್ನು ಸದುಪಯೋಗ ಮಾಡಿಕೊಳ್ಳುತ್ತಿರುವ ಬಗ್ಗೆ ಇಲಾಖಾ ಅಧಿಕಾರಿಗಳು ತಮ್ಮ ಪ್ರವಾಸದ ಸಮಯದಲ್ಲಿ ಹಲವಾರು ಶಾಲೆಗಳಿಗೆ ಖುದ್ದು ಭೇಟಿ ನೀಡಿ ವಿದ್ಯಾರ್ಥಿನಿಯರನ್ನು ಮಾತನಾಡಿಸಿ ಯೋಜನೆಯ ಬಗ್ಗೆ ವಿಚಾರಿಸಿದಾಗ ಎಲ್ಲಾ ಕಡೆಯು ಸ್ವಾಗತಾರ್ಹವಾದ, ಸಂತೋಷದಾಯಕವಾದ ಮತ್ತು ಅಭಿನಂದನಾರ್ಹವಾದ ಒಳ್ಳೆಯ ಪ್ರತಿಕ್ರಿಯೆ ವ್ಯಕ್ತವಾಗಿದೆ.

ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ದಿನಾಂಕ:03-06-2006ರೊಳಗೆ ಬಿ.ಪಿ.ಎಲ್. ಕುಟುಂಬಗಳಿಗೆ ಸೇರಿದ ಫಲಾನುಭವಿಗಳ ಪಟ್ಟಿಯನ್ನು ಸಲ್ಲಿಸಲು ಸೂಚಿಸಲಾಗಿತ್ತಾದರೂ ನಂತರ ಅಂದರೆ ಟೆಂಡರ್ ಪ್ರಕ್ರಿಯೆ ಮುಗಿದು ಸರಬರಾಜುದಾರರಿಗೆ ಬೈಸಿಕಲ್ ವಿತರಣೆ ಆದೇಶವನ್ನು ನೀಡಿದ ದಿನಾಂಕ 17-07-2006 ರವರೆವಿಗೂ ಬಂದ ಪ್ರಸ್ತಾವನೆಗಳನ್ನು ಪರಿಗಣಿಸಿ ಸರ್ಕಾರದಿಂದ ಅನುಮೋದನೆ ಪಡೆದು 1,75,023 ಫಲಾನುಭವಿಗಳಿಗೆ ಬೈಸಿಕಲ್‌ಗಳನ್ನು ವಿತರಿಸಲಾಗಿದೆ. ಕೆಲವು ಜಿಲ್ಲೆಗಳಲ್ಲಿ ಸಂಬಂಧಪಟ್ಟ ಇಲಾಖೆಯಿಂದ ಬಿ.ಪಿ.ಎಲ್. ಕಾರ್ಡ್‌ಗಳನ್ನು ಬಹಳ ತಡವಾಗಿ ವಿತರಿಸಿರುವುದರಿಂದ ನಿಗದಿಗೊಳಿಸಲಾದ ದಿನಾಂಕದ ನಂತರವೂ ಬಿ.ಪಿ.ಎಲ್ ವಿದ್ಯಾರ್ಥಿನಿಯರ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಈಗಾಗಲೇ ಶೈಕ್ಷಣಿಕ ಮತ್ತು ಆರ್ಥಿಕ ವರ್ಷವೂ ಮುಗಿಯುತ್ತಾ ಬಂದಿರುವುದರಿಂದ ಈ ಬೇಡಿಕೆಯನ್ನು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸುವುದು ಸಾಧ್ಯವಾಗದ ಕಾರಣ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪರಿಗಣಿಸಲಾಗುವುದು.

ಶ್ರೀ ದಿನೇಶ್ ಗುಂಡೂರಾವ್ :– ಉತ್ತರದಲ್ಲಿ ವಿದ್ಯಾರ್ಥಿನಿಯರಿಗೆ ಧೈರ್ಯ ಮತ್ತು ಆತ್ಮವಿಶ್ವಾಸ ಮೂಡಿಸಬೇಕೆಂದು ಹೇಳಿದ್ದಾರೆ, ಅದೇ ರೀತಿಯಾಗಿ ಪಾರದರ್ಶಕದ ಅಧಿನಿಯಮದ ಪ್ರಕಾರ ಇದನ್ನು 2,030–00 ರೂ.ಗಳಿಗೆ ಎಂದು ಅವರು ಉತ್ತರ ಕೊಟ್ಟಿದ್ದಾರೆ. ಒಂದು ಲಕ್ಷ ಎಪ್ಪತ್ತೈದು ಸೈಕಲ್‌ಗಳು ಈಗಾಗಲೇ ವಿತರಣೆಯಾಗಿದೆಯೆಂದು ಹೇಳುತ್ತಿದ್ದಾರೆ. ನಾವು ಕೂಡ ಈ ಹಿಂದೆ Right to Information Act ಅಡಿಯಲ್ಲಿಯೂ ಕೂಡ ಇದನ್ನೇ ಪ್ರಶ್ನೆ ಕೇಳಿದ್ದೆವು. ಅದರಲ್ಲಿಯೂ ಕೂಡ ತಾವು ಇದೇ ಪ್ರಕಾರವಾಗಿ ಈ ನಾಲ್ಕು ಕಂಪನಿಗಳಿಗೆ ನಾವು ಆರ್ಡರ್ ಕೊಟ್ಟಿದ್ದೇವೆ, 2030–00 ರೂ. ಎಂದು ತಾವು ಹೇಳಿದ್ದೀರಿ, ಈಗ ನನ್ನ ಒಂದು ಆರೋಪ ಏನು ಎಂದರೆ ಮಾನ್ಯ ಅಧ್ಯಕ್ಷರೇ, ಇವತ್ತು ಇದೇ ಕಂಪನಿಯಾದ ಅಟ್ಲಾಸ್ ಕಂಪನಿ ಏನಿದೆ, ಆ ಅಟ್ಲಾಸ್ ಕಂಪನಿಗೆ ಬಂಡವಾಳ ಹೂಡತಕ್ಕಂಥ ಶಾಲೆಯ ಮುಖಾಂತರ ಇದೇ specification ಪ್ರಕಾರ ಯಾವ government specification ಇದೆ. ಅಂದರೆ ಈ full chain cover, carrier, ಇರಬೇಕು ಮತ್ತೆ basket, bell, lock ಎಲ್ಲಾ ಇರಬೇಕು, side stand ಇರಬೇಕು, ಅದೇ specification ಪ್ರಕಾರ ನಮಗೆ ನಮ್ಮ ಈ ಶಾಲೆಯಲ್ಲಿ ಇನ್ನೂ 165 ಸೈಕಲ್‌ಗಳು ಬೇಕಾಗಿವೆ. ಸರ್ಕಾರ ಅದನ್ನು ಕೊಡುತ್ತಿಲ್ಲ, ಏಕೆಂದರೆ ಬಿ.ಪಿ.ಎಲ್. ಕಾರ್ಡ್ ಈ ರೀತಿಯ ಕಾನೂನೆಲ್ಲ ಇರುವುದರಿಂದ ಅದನ್ನು ಕೊಡಲಿಕ್ಕೆ ಬರುತ್ತಿಲ್ಲ. ಹಾಗಾಗಿ ನಮಗೆ ಇನ್ನೂ 165 ಸೈಕಲ್‌ಗಳು ಬೇಕು, ನೀವು ಅದನ್ನು ಕೊಡಿಸಬೇಕು ಎಂದು ಪತ್ರ ಬರೆದಿದ್ದೆವು. ಅದರ ಮೂಲಕ ಅವರು ಉತ್ತರ ಕೊಟ್ಟಿದ್ದಾರೆ, ಅದೇ specification ಗೆ 1746–00 ರೂ.ಗಳಿಗೆ ಕೊಡುತ್ತೇವೆ ಎಂದು ಹೇಳಿದ್ದಾರೆ, ಮಾನ್ಯ ಅಧ್ಯಕ್ಷರೇ, ತಾವು ದಯವಿಟ್ಟು ಸ್ವಲ್ಪ ಕೇಳಬೇಕು. ಬಹಳ ಗಂಭೀರವಾದ ವಿಚಾರ, 2030–00 ರೂ.ಗಳಂತೆ ಒಂದು ಲಕ್ಷ ಎಪ್ಪತ್ತೈದು ಸೈಕಲ್‌ಗಳನ್ನು ಇವರು ಪರ್ಚೇಸ್ ಮಾಡಿದ್ದಾರೆ. ಅದೇ specifications ಗೆ ನಾಲ್ಕು ಕಂಪನಿಗಳಲ್ಲಿ ಒಂದು ಅಟ್ಲಾಸ್ ಕಂಪನಿಯೊಂದಿದೆ. ಅದೇ ಕಂಪನಿಗೆ ನಾವು ಕೂಡ ಪತ್ರ ಬರೆದು ಈ ಶಾಲೆಗೆ ಇನ್ನೂ 165 ಸೈಕಲ್‌ಗಳು ಬೇಕಾಗಿವೆ, ಸರ್ಕಾರ ಕೊಟ್ಟಿಲ್ಲ, ನೀವು ಕೊಡಿ ಎಂದು ಕೇಳಿದೆವು. ಆಗ ಅದೇ ಕಂಪನಿ ಮ್ಯಾನೇಜರ್ ಪತ್ರ ಬರೆದು, 1,746–00 ರೂ.ಗಳಿಗೆ ಕೊಡಿಸುತ್ತೇವೆ, ಅದರಲ್ಲಿಯೂ ಕೂಡ 50–00 ರೂ. discount ಕೊಡುತ್ತೇವೆಂದೂ ಸಹ ಬರೆದಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :– ನಿಮಗೆ ಉತ್ತರ ಬೇಕಿದ್ದರೆ ಒಂದು ನಿಮಿಷ ಯೀಲ್ಡ್ ಆಗಿ. ಇಷ್ಟೇ ನಿಮ್ಮಲ್ಲಿ ವಿನಂತಿ ಮಾಡುವುದು, ಆ ಕಾಪಿಯನ್ನು ಕಳುಹಿಸಿಕೊಡಿ, ದಯಮಾಡಿ ಏತಕ್ಕೆ ಅವಸರ ಮಾಡುತ್ತೀರಿ, ಒಂದು ನಿಮಿಷ, ಇವತ್ತು ಮಾರ್ಕೆಟ್‌ನಲ್ಲಿ ನನಗಿರುವ ಮಾಹಿತಿಯ ಪ್ರಕಾರ ಸುಮಾರು 2,400 ರಿಂದ

2,450–00 ರೂ.ಇದೆ. ಹೆಣ್ಣುಮಕ್ಕಳಿಗೆ ಸೈಕಲ್ ತಂದ ಮೇಲೆ ನಾವು ಬಡಿದಾಡಿ ಟೆಂಡರ್ ಪ್ರೊಸೆಸ್ ಮತ್ತೊಂದು ಮಾಡಿದರೆ, ಮತ್ತೆ ಒಂದೊಂದು ಸೈಕಲ್‌ಗೆ 250, 300–00 ರೂ.ಗಳು ಮೈಮೇಲೆ ಬರುತ್ತದೆಂದು request ಮಾಡಿಕೊಂಡು ಒತ್ತಾಯ ಮಾಡಿ ಆ recognized company ಯಿಂದ ಸೈಕಲ್‌ಗಳನ್ನು ಗಂಡುಮಕ್ಕಳಿಗೂ ಕೊಡಿಸಿದ್ದೇವೆ. ನಿಮಗೇನಾದರೂ ಆ ರೀತಿ ಪತ್ರ ಬಂದಿದ್ದರೆ ದಯಮಾಡಿ ಅದರ ಕಾಪಿ ಕಳುಹಿಸಿಕೊಡಿ, ಏಕೆಂದರೆ ತಪ್ಪು ಮಾಹಿತಿ ಹೋಗಿ ಇಷ್ಟು ಒಳ್ಳೆಯ ಕೆಲಸವನ್ನು ಮಾಡಿರುವ ಅಧಿಕಾರಿಗಳ ಬಗ್ಗೆಯೂ ಸಹ ಕಪ್ಪುಚುಕ್ಕೆ ಮೂಡುತ್ತದೆ. ಅತ್ಯಂತ ಪ್ರಾಮಾಣಿಕವಾಗಿ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡಿದ್ದಾರೆ. ಪರಿಶೀಲನೆ ಮಾಡೋಣ. ಖಂಡಿತವಾಗಿ ಇದರ ಬಗ್ಗೆ ಇಡೀ ರಾಜ್ಯದಲ್ಲಿ ತಪ್ಪು ಗ್ರಹಿಕೆ ಆಗಬಾರದು.

(ಗೊಂದಲ)

ಶ್ರೀ ದಿನೇಶ್ ಗುಂಡುರಾವ್ :– ತಪ್ಪು ಮಾಹಿತಿ ಕೊಡಬೇಕೆಂದು ಅಲ್ಲ, ಸರ್ ಒಂದು ನಿಮಿಷ ನಾನು ಮುಗಿಸಿಬಿಡುತ್ತೇನೆ, ತಾಳಿ, ಆ ಪತ್ರದ ಕಾಪಿಯನ್ನು ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಸನ್ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ನಾವು ಏನು ಮನವಿ ಮಾಡಿಕೊಳ್ಳುತ್ತೇವೆ ಎಂದರೆ ಗೆಳೆಯ ದಿನೇಶ್ ಪ್ರಸ್ತಾಪ ಮಾಡಿರುವುದರಲ್ಲಿ ನಿಮ್ಮ ಯೋಜನೆಯ ಸಾರ್ಥಕತೆಯ ಬಗ್ಗೆ ಅವರು ಪ್ರಶ್ನೆ ಮಾಡುತ್ತಿಲ್ಲ. ಆಮೇಲೆ ನೀವ್ಯಾರು ಇದರಲ್ಲಿ ಹೆಚ್ಚು ಕಡಿಮೆ ಮಾಡಿಬಿಟ್ಟಿದ್ದೇರೆಂದು ಆರೋಪ ಮಾಡುತ್ತಿಲ್ಲ, ಸರ್ಕಾರ ಕೇಳಿದಾಗ ಅವರು ಈ ರೀತಿ ಹೇಳಿದ್ದಾರೆ, ನಾವು ಮಾರುವೇಷದಲ್ಲಿ ಮತ್ತೊಂದು ವಿದ್ಯಾ ಸಂಸ್ಥೆಯ ಮೂಲಕ ಇಷ್ಟು ಸೈಕಲ್‌ಗಳ ಬೇಡಿಕೆ ಇದೆಯೆಂದು ಅದೇ ಕಂಪನಿಗೆ ಕೇಳಿದಾಗ ಈ ದರಕ್ಕೆ ಕೊಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ಅದರಿಂದ ನೀವು ಹೇಳಿದ್ದು ಯೋಗ್ಯವಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ನೀವು ಆ ಪತ್ರದ ಪ್ರತಿಯನ್ನು ಕಳುಹಿಸಿಕೊಡಿ, ಪರಿಶೀಲನೆ ಮಾಡುತ್ತೇವೆ, ನನ್ನದೇನೂ ಇಲ್ಲ, ದಯಮಾಡಿ ಕಳುಹಿಸಿಕೊಡಿ. ನಾಳೆ ಅದೇ ಮಾಧ್ಯಮದಲ್ಲಿ ಬಂದು ತಪ್ಪು ಗ್ರಹಿಕೆ ಆಗಬಾರದು.

ಶ್ರೀ ದಿನೇಶ್ ಗುಂಡುರಾವ್ :– ಎರಡೇ ನಿಮಿಷ ಮುಗಿಸುತ್ತೇನೆ, ಸಾರ್ವಜನಿಕವಾಗಿಯೂ ಈ ವಿಷಯ ಗೊತ್ತಾಗಬೇಕಲ್ಲವೇ, ಇದೇ ಲೆಕ್ಕಾಚಾರವಾಗಿ ತೆಗೆದುಕೊಂಡರೂ ಸಹ ಹೆಚ್ಚು ಕಡಿಮೆ 5.00 ಕೋಟಿ ರೂ.ಗಳಿಗಿಂತ ಹೆಚ್ಚು ವ್ಯತ್ಯಾಸ ಬರುತ್ತಿದೆ. ಒಂದು ಲಕ್ಷ ಎಪ್ಪತ್ತೈದು ಸಾವಿರ ಎಂದು ಹೇಳಿದರು, ಬಹುಶಃ ನಮಗೆ

ಕೊಟ್ಟಿರತಕ್ಕಂಥ rate ಗಿಂತ ಕಡಿಮೆ ದರದಲ್ಲಿ ಕೊಡಬೇಕಾಗಿತ್ತು. ಏಕೆಂದರೆ ನಾವು ಕೇವಲ 165 ಸೈಕಲ್‌ಗಳನ್ನು ಮಾತ್ರ ಕೇಳಿರುವುದು. ಆದ್ದರಿಂದ ನಾನು ಆ ಪತ್ರದ ಪ್ರತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ನಾನೇನು ಸನ್ಮಾನ್ಯ ಬಸವರಾಜ ಹೊರಟ್ಟಿಯವರು ಇದರಿಂದ ದುಡ್ಡು ತೆಗೆದುಕೊಂಡಿದ್ದಾರೆಂದು ಹೇಳುತ್ತಿಲ್ಲ, ಸರ್ಕಾರದವರು ತೆಗೆದುಕೊಂಡಿದ್ದಾರೆಂದು ಹೇಳುತ್ತಿಲ್ಲ ಅಥವಾ ಅಧಿಕಾರಿಗಳು ಹಣ ತೆಗೆದುಕೊಂಡಿದ್ದಾರೆಂದು ಹೇಳುತ್ತಿಲ್ಲ, ಇದು ಲೋಪದೋಷವಿರಬಹುದು ಅಥವಾ ಯಾರೋ ಕೆಲವು ಭ್ರಷ್ಟ ಅಧಿಕಾರಿಗಳೂ ಕೂಡ ಮಾಡಿಕೊಂಡಿರಬಹುದೇನೋ ನನಗೆ ಗೊತ್ತಿಲ್ಲ, ಆದರ ಈ ಮಾಹಿತಿ ಅದೇ specification ಪ್ರಕಾರ ಕೇಳಿದ್ದೇವೆ. ಅದನ್ನು ಕೊಟ್ಟಿದ್ದಾರೆ, ಇದು ಬಹಳ ಗಂಭೀರವಾದ ವಿಚಾರವಲ್ಲವೇ ಮಾನ್ಯ ಅಧ್ಯಕ್ಷರೇ, ನನ್ನ ಒತ್ತಾಯವೇನೆಂದರೆ ನಮ್ಮ ಮಾಹಿತಿಯನ್ನು ಕೂಡ ಕೊಡುತ್ತೇವೆ, ದಯವಿಟ್ಟು ಇದರ ಬಗ್ಗೆ ಪರಿಶೀಲನೆ ಮಾಡಿ ತನಿಖೆ ಮಾಡಿಸಿ ಹೇಗೆ ಈ ರೀತಿ ಆಗಿದೆ, ನಿಜಕ್ಕೂ ಇದರಿಂದ ಸರ್ಕಾರಕ್ಕೆ ಏನಾದರೂ ನಷ್ಟವಾಗಿದ್ದರೆ ಅದನ್ನು ಸರಪಡಿಸಬೇಕು ಅದೇ ನಮ್ಮ ಒತ್ತಾಯ.

ಶ್ರೀ ಬಿ.ಎಸ್. ಯಡಿಯೂರಪ್ಪ :– ನೀವು ಆ ಪತ್ರದ ಪ್ರತಿಯನ್ನು ಕಳುಹಿಸಿಕೊಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಆ ಶಾಲೆಗೆ ಆ ದರಕ್ಕೆ ಸೈಕಲ್‌ಗಳನ್ನು ಕೊಡುವುದಾದರೆ, ಆ ದರದಲ್ಲಿ ಲೆಕ್ಕ ಹಾಕಿದರೆ ಸರ್ಕಾರ ಖರೀದಿಸಿದ ಸೈಕಲ್‌ಗಳಿಗೆ ಎಷ್ಟು ಕಡಿಮೆ ಆಗುತ್ತಿತ್ತು, ಈಗ ದುಬಾರಿಯಾಗಿದೆ, ಆತ ಚಿಕ್ಕ ವಯಸ್ಸಾದರೂ ಬಹಳ ಜವಾಬ್ದಾರಿಯಿಂದ ಯಾರೊಬ್ಬರ ಮೇಲೂ ಅಪಾದನೆ ಮಾಡಿಲ್ಲ. ಆದರೆ ಈ 5.00 ಕೋಟಿ ರೂ.ಗಳಿಂದ ಸರ್ಕಾರಕ್ಕೆ ಇನ್ನಾವುದೇ ಒಳ್ಳೆಯ ಕೆಲಸಕ್ಕೆ ಉಪಯೋಗ ಮಾಡಬಹುದಲ್ಲವೇ? ನಿಮ್ಮ ಪ್ರಾಮಾಣಿಕತೆಯಲ್ಲಿ ಯೋಜನೆಯ ಹಿಂದೆ ಇರುವ ಉದ್ದೇಶವೇನಿದೆ ಅವೆಲ್ಲವನ್ನು ನಾವು ಸಂಪೂರ್ಣವಾಗಿ ಸ್ವಾಗತಿಸುತ್ತೇವೆ. ಆ ಸ್ವಾತಂತ್ರ್ಯವನ್ನು ಕೂಡ ಅವರು ನಿಮಗೆ ಕೊಟ್ಟಿದ್ದಾರೆ. ನಿಮಗೆ ಯಾವುದು ಯೋಗ್ಯವೆನಿಸುತ್ತದೆ ಆ ರೀತಿ enquiry ಮಾಡಿ. ದಯಮಾಡಿ ಸದನ ಮುಂದೆ ಸೇರಿದಾಗ ಈ ರೀತಿ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದರೆ ಸಾಕು.

ಶ್ರೀ ಬಿ.ಎಸ್. ಯಡಿಯೂರಪ್ಪ :– ಅವರು ಮಾಹಿತಿಯನ್ನು ಕಳುಹಿಸಿಕೊಡಲಿ, ಖಂಡಿತ ಆ ಕಂಪನಿಯವರನ್ನು ಕರೆಸೋಣ. ಆ letter authentic ಇದೆಯೇ, ಅದು ಯಾರು, ಏನು ಬರೆದಿದ್ದಾರೆ, ಎಷ್ಟರ ಮಟ್ಟಿಗೆ ಅದು ಸರಿಯೆನ್ನುವುದನ್ನು ನೋಡೋಣ. ನಾನೇನು ಹೇಳುತ್ತಿದ್ದೇನೆಂದರೆ ಹತ್ತಾರು ಕಡೆ ಇಷ್ಟೊಂದು ಪಾರದರ್ಶಕತೆಯಿಂದ ಈ ಸರ್ಕಾರ, ನಮ್ಮ ಶಿಕ್ಷಣ ಇಲಾಖಾಧಿಕಾರಿಗಳು ಕೆಲಸ ಮಾಡಿದ್ದಾರೆ ಎನ್ನುವಂಥ ಒಳ್ಳೆಯ ಅಭಿಪ್ರಾಯವಿದೆ. ಮಾರ್ಕೆಟ್‌ನಲ್ಲಿ ಇವತ್ತು ಇದೇ ಸೈಕಲ್‌ಗೆ 200–00, 250–00

ರೂ.ಗಳು ಬೆಲೆ ಜಾಸ್ತಿಯಿದೆಯೆಂದು ಹತ್ತಾರು ಕಡೆ ವಿಚಾರಿಸಿ ಹೇಳಿದ್ದಾರೆ, ಅವರು ಕಳುಹಿಸಿಕೊಟ್ಟಿರುವ ಪತ್ರವನ್ನು ಪರಿಶೀಲನೆ ಮಾಡೋಣ. ಶಿಕ್ಷಣ ಇಲಾಖೆಯವರ ಮಧ್ಯೆ ನಾನೇಕೆ ಎದ್ದೆ ಎಂದರೆ ಮಾಧ್ಯಮದ ಮೂಲಕ ಇಡೀ ರಾಜ್ಯಕ್ಕೆ ಎಂದರೆ ಸುಮಾರು ಒಂದು ಮುಕ್ಕಾಲು ಲಕ್ಷ ಹೆಣ್ಣು ಮಕ್ಕಳು 2 ಅಥವಾ 2.25 ಗಂಡು ಮಕ್ಕಳಿಗೆ ಕೊಟ್ಟಿರುವಂಥಾದ್ದು ಏನೋ ವ್ಯತ್ಯಾಸವಾಗಿದೆ ಎಂಬ ಮೆಸೇಜ್ ಈ ಮನೆಯಿಂದ ಹೋಗುವುದು ಬೇಡ, ಅದು ಯಾರಿಗೂ ಶೋಭೆ ತರುವಂಥದ್ದಲ್ಲ, ಅದರ ಬಗ್ಗೆ ಪರಿಶೀಲನೆ ಮಾಡೋಣ.

ಶ್ರೀ ದಿನೇಶ್ ಗುಂಡುರಾವ್ :– ನಾವೇನು ಇದರ ಬಗ್ಗೆ ತಪ್ಪು ಮೆಸೇಜ್ ಕೊಡುತ್ತಿಲ್ಲ.

(ಗೊಂದಲ)

ಛೇರ್ಮನ್ :– ದಿನೇಶ್‌ರವರೇ ತಮ್ಮ ಪತ್ರದ ಪ್ರತಿಯನ್ನು ಕಳುಹಿಸಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಆ ಪತ್ರದ ಪ್ರತಿಯನ್ನು ಕಳುಹಿಸಿಕೊಡಿ.

ಶ್ರೀ ದಿನೇಶ್ ಗುಂಡುರಾವ್ :– ಇದರಲ್ಲಿರುವ ಸತ್ಯಾಂಶವನ್ನು ತಾವು ಆಚೆಗೆ ತರಬೇಕು, ಈ ಪತ್ರದ ಪ್ರತಿಯನ್ನು ಕಳುಹಿಸಿಕೊಡುತ್ತೇನೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– enquiry ಆಗಬೇಕು, ಇದರಲ್ಲಿ ನಿರ್ದಿಷ್ಟವಾದಂಥ enquiry ಆಗಬೇಕು. ಏಕೆಂದರೆ 35.00 ಕೋಟಿ ರೂ.ಗಳಲ್ಲಿ 5.00 ಕೋಟಿ ರೂಪಾಯಿಗಳೆಂದರೆ ಬಹಳ ದೊಡ್ಡ ಹಗರಣವಾಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ :– ಅವರು ಹೇಳುವುದಕ್ಕೆ ಒಂದು ಪುರಾವೆ ಎನ್ನುವುದಕ್ಕೆ ನಾನು ನಿನ್ನೆ ಒಂದು ಹಳ್ಳಿಗೆ ಹೋಗಿದ್ದೆ. ಶಹಾಪುರಕ್ಕೆ, ಅಲ್ಲಿ ಸೈಕಲ್‌ಗಳು ಮುರಿದುಹೋಗಿರುವುದನ್ನು ಆ ಹೆಣ್ಣು ಮಕ್ಕಳು ತೋರಿಸಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ :– ಒಂದು ನಿಮಿಷ, ನಾನೇಕೆ ಎದ್ದು ನಿಂತು ಈ ಮಾತನ್ನು ಹೇಳಿದೆ ಎಂದರೆ ವಾಟಾಳ್ ನಾಗರಾಜ್‌ರವರೇ, ರಮೇಶ್ ಕುಮಾರ್ ಮತ್ತು ಮಾಧುಸ್ವಾಮಿಯವರೇ ಈ ಕಾರ್ಯಕ್ರಮ ಈ ವರ್ಷವೂ ಕೂಡ ಇರುವಂಥಾದ್ದು, ಆ ರೀತಿ ವ್ಯತ್ಯಾಸವಾಗುವುದಾದರೆ ನಾವೆಲ್ಲರೂ ಮುಂಚಿತವಾಗಿ ಸೇರಿಕೊಂಡು ಇನ್ನೂ ಹತ್ತು ಕಂಪನಿಗಳನ್ನು ಕರೆಸಿ ನೂರು ರೂಪಾಯಿಗಳು ಒಂದು ಸೈಕಲ್‌ಗೆ ಕಡಿಮೆಯಾದರೂ ಎಷ್ಟೂ ಲಕ್ಷವಾಯಿತು, ನಾವು ರೆಡಿಯಿದ್ದೇವೆ, ಅದಕ್ಕೋಸ್ಕರ ಆ ಪತ್ರವನ್ನು ಕಳುಹಿಸಿಕೊಡಿ,

ಅದನ್ನು ಪರಿಶೀಲನೆ ಮಾಡೋಣವೆಂದು ಹೇಳುತ್ತಿದ್ದೇನೆ ಅದು ಬಿಟ್ಟರೆ ನಾನು ಬೇರೇನು ಮಾತನಾಡುವುದಿಲ್ಲ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಪರಿಶೀಲನೆಯಲ್ಲ, ಇದರ ಬಗ್ಗೆ ತನಿಖೆ ಮಾಡಲು ನಿರ್ದಿಷ್ಟವಾದ ಆದೇಶವನ್ನು ಕೊಡಬೇಕು. ತನಿಖೆಯಾಗಲಿ.

ಶ್ರೀ ದಿನೇಶ್ ಗುಂಡುರಾವ್ :– ಇದರ ಬಗ್ಗೆ ದಯವಿಟ್ಟು ತನಿಖೆ ಮಾಡಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ನಾನು ಬೇಡವೆಂದು ಹೇಳುತ್ತಿಲ್ಲ.

ಶ್ರೀ ದಿನೇಶ್ ಗುಂಡುರಾವ್ :– ಉಪ ಮುಖ್ಯಮಂತ್ರಿಗಳೇ ಇದು ಬಹಳ ಗಂಭೀರವಾದಂಥ ವಿಚಾರ, ನಾವು ಪ್ರಚಾರಕ್ಕಾಗಿ ಇದರ ಬಗ್ಗೆ ಆರೋಪ ಮಾಡುತ್ತಿಲ್ಲ. ಅಥವಾ ಯಾರ ಮೇಲಾದರೂ ದ್ವೇಷಿಸಬೇಕೆಂದು ಈ ಆರೋಪ ಮಾಡುತ್ತಿಲ್ಲ. ರಾಜ್ಯಕ್ಕೆ ಬೊಕ್ಕಸಕ್ಕೆ ನಷ್ಟವಾಗಬಾರದು ಮತ್ತು ತಾವು ಒಳ್ಳೆಯ ಉದ್ದೇಶದಿಂದ ಏನು ಯೋಜನೆ ಮಾಡಿದ್ದೀರಿ ಅದರ ಸಂಪೂರ್ಣ ಸಫಲತೆ ಆಗಬೇಕು ಅಷ್ಟೇ ನಮ್ಮದು, ತನಿಖೆ ಮಾಡಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಆಯಿತು.

ಛೇರ್ಮನ್ :– ಒಂದು ನಿಮಿಷ ದಿನೇಶ್ ಕುಳಿತುಕೊಳ್ಳಿ.

ಶ್ರೀ ಬಸವರಾಜ್ ಎಸ್. ಹೊರಟ್ಟಿ :– 2000 ದಲ್ಲಿ ಏನು Transparency Act ನೊಳಗೆ ಇದಕ್ಕೆ ಟೆಂಡರ್ ಕರೆಯಲಾಗಿದೆ. Open tender ಕರೆದಿದ್ದೇವೆ, ಎಲ್ಲಿಯೂ ಮುಚ್ಚು ಮರೆ ಮಾಡಿ ಖರೀದಿ ಮಾಡಿಲ್ಲ. ಅದರ ಪ್ರಕಾರ ನಾಲ್ಕು ಕಂಪನಿಗಳು ಭಾಗವಹಿಸಿದ್ದವು. ಆ ಕಂಪನಿಗಳ ಪೈಕಿ ದಿನೇಶ್ ಹೇಳಿದ ಹಾಗೆ ಅದೇ ಕಂಪನಿಯ ಪತ್ರವಾಗಿದ್ದು ಏನಾದರೂ ತಪ್ಪು ಆಗಿದ್ದರೆ ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲಿಕ್ಕೆ ತಯಾರಿದೆ. ಇದರಲ್ಲಿ ಎರಡು ಮಾತೇ ಇಲ್ಲ, ಬೇಕಾದ್ದು ಬರಲಿ.

ಶ್ರೀ ದಿನೇಶ್ ಗುಂಡುರಾವ್ :– ತನಿಖೆ ಮಾಡಿಸಬೇಕು.

ಶ್ರೀ ಬಸವರಾಜ್ ಎಸ್. ಹೊರಟ್ಟಿ :– ಆಯಿತು ತನಿಖೆ ಮಾಡಿಸುತ್ತೇವೆ.

ಛೇರ್ಮನ್ :– ಶಿವರಾಮುರವರ ಹೆಸರು ಕರೆದಿದ್ದೇನೆ. ನಂತರ ಪಾಪರೆಡ್ಡಿಯವರೇ ತಮಗೆ ಅವಕಾಶ ಕೊಡುತ್ತೇನೆ.